## 12. ಮಹಾರಾಷ್ಟ್ರದತ್ತ ಮಿಡತೆ ದಂಡು

ಪಾಕ್‌ನಿಂದ ರಾಜಸ್ಥಾನದ ಮೂಲಕ ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲಿ ಬೆಳೆಗಳನ್ನು ತಿಂದು ತೇಗಿದ ಮಿಡತೆಗಳ ಹಿಂಡು ಈಗ ಮಹಾರಾಷ್ಟ್ರದತ್ತ ತಿರುಗಿದೆ. ವಿದರ್ಭಕ್ಕೆ ದಾಂಗುಡಿ ಇರಿಸಿರುವ ಲಕ್ಷೋಪಲಕ್ಷ ಮಿಡತೆಗಳು ಐದಾರೂ ಹಳ್ಳಿಗಳಲ್ಲಿ ಬೆಳೆ ಬರಿದು ಮಾಡಿವೆ.

ಅಮರಾವತಿ ಜಿಲ್ಲೆಯ ಮೂಲಕ ರಾಜ್ಯ ಪ್ರವೇಶಿಸಿದ ಮಿಡತೆಗಳ ಹಿಂಡು, ನಾಗಪುರ ಜಿಲ್ಲೆಯ ಕತ್ತೋಲ್ ತಾಲ್ಲೂಕಿನ ರೈತರ ಹೊಲಗಳಿಗೆ ದಾಳಿ ಇರಿಸಿದೆ. ಮಿಡತೆಗಳನ್ನು ನಿಯಂತ್ರಿಸಲು ರಾಸಾಯನಿಕ ಸಿಂಪಡಣೆ ಮಾಡಲಾಗುತ್ತಿದೆ ಎಂದು ಮಹಾರಾಷ್ಟ್ರದ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಭೋಸ್ಲೆ ತಿಳಿಸಿರುತ್ತಾರೆ. ಮಹಾರಾಷ್ಟ್ರದಲ್ಲಿ ಮಿಡತೆಗಳ ಹತೋಟಿ ಸಾಧ್ಯವಾಗದಿದ್ದರೆ ಈ ರಾಜ್ಯದ ಜೊತೆ ಗಡಿ ಹಂಚಿಕೊಂಡಿರುವ ಕರ್ನಾಟಕದ ಜಿಲ್ಲೆಗಳಿಗೂ ಅವು ಪ್ರವೇಶಿಸುವ ಸಾಧ್ಯತೆ ಇದೆ. ಮಿಡತೆಗಳ ಹಾವಳಿಗೆ ತುತ್ತಾಗಿರುವ ರಾಜ್ಯಗಳ ಜೊತೆ ಗಡಿ ಹಂಚಿಕೊಂಡಿರುವ ಗುಜರಾತ್, ಪಾಕ್ ಗಡಿ ಹಂಚಿಕೊಂಡಿರುವ ಪಂಜಾಬ್, ಹರಿಯಾಣಗಳಲ್ಲಿ ಸಂಭಾವ್ಯ ದಾಳಿ ತಡೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

**ಮಿಡತೆ ತಡೆಗೆ ವಿಮಾನ:** ರಾಜಸ್ಥಾನದಲ್ಲಿ ಮಿಡತೆಗಳ ಹಾವಳಿ ನಿಯಂತ್ರಿಸಲು ವಿಮಾನ, ಡ್ರೋಣ್ ಮೂಲಕ ಕೀಟನಾಶಕದ ಸಿಂಪಡಣೆ ಮಾಡಲಾಗುತ್ತಿದೆ ಎಂದು ಕೃಷಿ ತಾಂತ್ರಿಕ ನಿರ್ವಹಣಾ ಸಂಸ್ಥೆ ತಿಳಿಸಿದೆ. ಈ ಮಿಡತೆಗಳು ಸಾಮಾನ್ಯವಾಗಿ ಪಶ್ಚಿಮ ರಾಜಸ್ಥಾನದಲ್ಲಿ ಪ್ರತಿವರ್ಷ ಉಪಟಳ ನೀಡುತ್ತವೆ. ಆದರೆ, ಈ ವರ್ಷ ಜೈಪುರ ಜಿಲ್ಲೆಗೂ ಕಾಲಿರಿಸಿ, ಗಿಡ–ಮರಗಳನ್ನೂ ಬಿಟ್ಟಿಲ್ಲ ಎಂದು ಸಂಸ್ಥೆಯ ಯೋಜನಾ ನಿರ್ದೇಶಕ ಬಿ.ಆರ್. ಕರ್ವಾ ತಿಳಿಸಿದರು. ರೈತರ ಬೆಳೆಯನ್ನು ರಕ್ಷಿಸಲು ಹೆಚ್ಚು ವಿಮಾನ ಸೇವೆ ಒದಗಿಸುವಂತೆ ಕೇಂದ್ರ ಕೃಷಿ ಸಚಿವ ಕೈಲಾಶ್ ಚೌಧರಿ, ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯಕ್ಕೆ ಮನವಿ ಮಾಡಿಕೊಂಡಿರುತ್ತಾರೆ.

ಆಧಾರ:ವಿಜಯವಾಣಿ, ದಿನಾಂಕ:27.05.2020